


**ಚಿಂತನಾರ್ಹ**

'ಎಳವೆಯಲ್ಲೇ ಸುಲೋಚನ' (ಸುಧಾ, ಜೂನ್ 25) ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ ಚಿಂತನಾರ್ಹವಾಗಿದೆ. ದೃಷ್ಟಿಮಾಂದ್ಯತೆ ಬಗ್ಗೆ ಪೋಷಕರು ಹಾಗೂ ಮಕ್ಕಳು ಗಮನ ಹರಿಸಬೇಕಾಗಿದೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಮಹಾವೀರ ಕಾಸರ, ಪಿ. ಗೋವಿಂದರಾಜ್, ಶಿವಮೊಗ್ಗ, ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ, ಬೆಳ್ಳಾವೆ ರಮೇಶ್, ಬೆಂಗಳೂರು

**ವಾಸ್ತವತೆಯ ಪ್ರತಿಬಿಂಬ**

'ನಾಗರಿಕ ಪ್ರಜ್ಞೆ' ಕುರಿತಾದ ಮೂಚಿ ಅವರ ವಿಚಾರ ಲಹರಿ ವಾಸ್ತವತೆಯ ಪ್ರತಿಬಿಂಬದಂತಿದೆ.

- ನೆ.ಲ.ರಾಂ, ಬೆಂಗಳೂರು, ಎಂ.ಜಿ. ರಾಮಚಂದ್ರ, ಮಂಡಗಳಲೆ, ಮಹಾದೇವಿ ಅಗಸಿಮನಿ, ಶಿವಮೊಗ್ಗ

**ಯೋಗದ ರಾಜಕೀಯ**

'ನಿಮ್ಮೊಡನೆ'ಯಲ್ಲಿ (ರಘುನಾಥ ಚ.ಹ.) 'ಯೋಗದ ಹೆಸರಿನಲ್ಲಿ ರಾಜಕೀಯ' ಬರಹ ಚಿಂತನಾರ್ಹವಾಗಿದೆ.

-ಮುಕುಂದ ಹೆರಕಲ್ಲ, ಕಲಬುರಗಿ

**ತಪ್ಪಾಗಿ ಅಚ್ಚಾಗಿದೆ**

'ಮಂಗಳನ ಅಂಗಳದಲ್ಲಿ ಅವಳಿ ರೊಬಾಟ್‌ಗಳು' ಎಂಬ ನನ್ನ ಲೇಖನ 'ಸುಧಾ' ದಲ್ಲಿ ಪ್ರಕಟವಾದದ್ದು ನೋಡಿದೆ. ಅದರಲ್ಲಿ ಒಂದು ತಪ್ಪು ಅಚ್ಚಾಗಿದೆ. ಮಂಗಳನ ಮೇಲ್ಮೈ ತಾಪಮಾನ ಹೇಳುವಾಗ ಮೂರೂ ಸಂಖ್ಯೆಗಳಲ್ಲಿ ಒಂದೊಂದು ಸೊನ್ನೆ ಹೆಚ್ಚು ಸೇರಿಕೊಂಡುಬಿಟ್ಟಿದೆ. ಡಿಗ್ರಿ ಚಿಹ್ನೆಯನ್ನು ಮೇಲುಗಡೆ ಬರೆದಿದ್ದೆ, ಅದು ಸೊನ್ನೆಯಾಗಿ ಬಿಟ್ಟಿದೆ. 63 ಡಿಗ್ರಿ ಸೆಂಟಿಗ್ರೇಡ್ ಅಂತಿರಬೇಕಾದಲ್ಲಿ 630 ಸೆಂಟಿಗ್ರೇಡ್ ಆಗಿಬಿಟ್ಟಿದೆಯಲ್ಲ?

-ಸರೋಜಾ ಪ್ರಕಾಶ

ಹೌದು, ಕಣ್ತಪ್ಪಿನಿಂದ ಆದ ಪ್ರಮಾದಕ್ಕೆ ವಿಷಾದಿಸುತ್ತೇವೆ. (ಸಂ)

**ಕುತೂಹಲಕರ**

'ಕಾಶ್ಮೀರದಲ್ಲಿ ಕಾಂಗ್ರಿ' ಡಾ.ಎಸ್.ಬಿ. ರವಿಕುಮಾರ್ ಅವರ ಪ್ರವಾಸ ಲೇಖನ ಕುತೂಹಲಕಾರಿಯಾಗಿದೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

**ಸ್ವಾಗತಾರ್ಹ**

ಫ್ಯಾಷನ್ ಪುಟದಲ್ಲಿ 'ಎವರ್‌ಗ್ರೀನ್ ರೇಷ್ಮೆ ಸೀರೆ' (ಆಶಾ ಎಸ್. ಕುಲಕರ್ಣಿ) ಬರಹ ಚೆನ್ನಾಗಿದೆ. ಭಾರತದ ಶೇ.80ರಷ್ಟು ಮಹಿಳೆಯರು ಸೀರೆ ಉಡುವ ಸಂಪ್ರದಾಯವನ್ನು ಇರಿಸಿಕೊಂಡಿರುವುದು ಸ್ವಾಗತಾರ್ಹ.

-ರಮ್ಯಾ ಬೆಳ್ಳಾವೆ, ವಿಜಯಾ ರಮೇಶ್, ಬೆಂಗಳೂರು

**ರೇಷ್ಮೆ ವೈಭವ**

ಅಮೆರಿಕ ವೀಕ್ಷಣೆಗಾಗಿ ಡಿಸ್ನಿಲ್ಯಾಂಡ್‌ನಲ್ಲಿರುವಾಗ ನಮ್ಮ ಟೀಮಿನ ನಾಲ್ವರು ಮಹಿಳೆಯರು ಮೈಸೂರು ರೇಷ್ಮೆ ಸೀರೆಯಲ್ಲಿ ಶೋಭಿಸುತ್ತಿದ್ದರು. ಅಲ್ಲಿರುವ ವಿದೇಶಿ ಮಹಿಳೆಯರು ರೇಷ್ಮೆ ಸೀರೆ ವೈಭವವನ್ನು ಕಣ್ತುಂಬಿಕೊಂಡು ಮುಟ್ಟಿ ಮುಟ್ಟಿ ನೋಡಿ ಆನಂದಿಸಿದರು. ರೇಷ್ಮೆ ಸೀರೆ ಬಗ್ಗೆ ಹೆಮ್ಮೆ ಎನಿಸಿತು.

-ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

**ಮನೋಜ್ಞ ನಿರೂಪಣೆ**

'ಗೋವಿನ ಹಾಡಿನಿಂದ ಬದುಕಿನ ಪಾಠ' (ಸಿ.ಎಸ್. ಅನುರಾಧ) ಲೇಖನದಲ್ಲಿ ಎಲ್ಲ ಹಳ್ಳಿ ಮನೆಗಳಲ್ಲಿ ಇರುವ ಗೋಪಾಲನೆಯ ವಿಚಾರವನ್ನು ಲೇಖಕಿ ಮನೋಜ್ಞವಾಗಿ ನಿರೂಪಿಸಿದ್ದಾರೆ.

-ಟಿ.ಎಸ್. ಸರಸ್ವತಿ, ತುರುವೇಕೆರೆ, ಸುಂದರ್, ಬೆಂಗಳೂರು

**ಉಪಯುಕ್ತ ಮಾಹಿತಿ**

'ಮಲಬದ್ಧತೆ ನಿವಾರಣೆಗೆ ಯೋಗ' ಆರೋಗ್ಯ ಲೇಖನ (ಶಿವಪ್ರಕಾಶ್ ಭೋಗಣ್ಣ) ಉಪಯುಕ್ತ ಮಾಹಿತಿ ನೀಡಿದೆ.

-ದೀಪಕ್ ಕಂಬದಕೋಣೆ

**ಸಕಾಲಿಕ ಬರಹ**

ಧಾರಿಣಿ ಎಚ್.ಬಿ. ಅವರು ಬರೆದ 'ನಂಬಿ ಕೆಟ್ಟವರಿದ್ದಾರೆ.. ಎಚ್ಚರಿಕೆ' ಬರಹ ಸಕಾಲಿಕ ವಿಚಾರಗಳ ಮೇಲೆ ಬೆಳಕು ಚೆಲ್ಲಿದೆ.

-ಜಯದೇವ ಹಲಕಿ, ಗೋಕಾಕ, ಎಚ್. ಆನಂದಕುಮಾರ್, ಚಿತ್ರದುರ್ಗ

**ಮಾರ್ಮಿಕ ಕಥೆ**

ಸತ್ಯಪ್ರಭಾ ಹೆಗ್ಡೆ ಅವರ ಕಥೆ 'ಅಪ್ಪ' ಮಾರ್ಮಿಕವಾಗಿದೆ. 'ಅಪ್ಪಂದಿರ ದಿನ'ಕ್ಕೆ ಹಿನ್ನೆಲೆಯಾಗಿ ಪ್ರಕಟವಾದ ಕಥೆ ಸಕಾಲಿಕವೂ ಆಗಿದೆ.

-ರಾಜಶೇಖರ ಹಾದಿಮನಿ, ಧಾರವಾಡ, ಪ್ರಭಾ ನಾಗರಾಜ್, ಬೆಂಗಳೂರು, ಕೊಹಿಮ ಬಸರಕೋಡು

**ಮೆಚ್ಚುಗೆಯಾಯಿತು**

ದೃಶ್ಯ ಮಾಲಿನ್ಯ ಕುರಿತು ಸವಿತಾ ನಾಗೇಶ್ ಲೇಖನ ಮೆಚ್ಚುಗೆಯಾಯಿತು.

-ಚಂದ್ರಿಕಾ ಜೆ. ಬೆಂಗಳೂರು, ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

**ಹೆಮ್ಮೆಯ ವಿಷಯ**

'ಎಲ್ಲಿಂದಲೋ ಬಂದವರು' ಅಂಕಣದಲ್ಲಿ ಫ್ರಾನ್ಸ್ ಮೂಲದ ಎಂಜಿನಿಯರ್ ಉದ್ಯೋಗಿ ಕುಟುಂಬ ಬೆಂಗಳೂರಿಗೆ ಬಂದು ನೆಲೆಸಿ, ಭಾರತದ ಪ್ರವಾಸಿ ತಾಣಗಳನ್ನು ಅದ್ಭುತ ಎಂದು ಗುರುತಿಸಿರುವುದು ನಿಜಕ್ಕೂ ಹೆಮ್ಮೆಯ ವಿಷಯ.

-ನಾರಾಯಣ ಯಾಜಿ, ಶಿರಾಲಿ

**ಪ್ರತಿಸ್ಪಂದನ**

'ಪ್ರತಿಸ್ಪಂದನ'ದಲ್ಲಿ ಸಂಗೀತಾ ಅವರೊಂದಿಗೆ ರಾಗು ನಡೆಸಿದ ಸಂದರ್ಶನ ಚೆನ್ನಾಗಿದೆ.

-ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

**ಪಚ್‌ಮಡಿ**

'ಪಚ್‌ಮೋರಿ ಎಂಬ ಪ್ರಿಯದರ್ಶಿನಿ' (ಸುಧಾ, ಜೂನ್ 18) ಪ್ರವಾಸ ಲೇಖನದಲ್ಲಿ (ಎನ್.ಎಸ್. ಶಾರದಾ)ಪಚ್‌ಮೋರಿ ಎಂದಿದೆ. ಅದು ಪಚ್‌ಮಡಿ ಎಂದಾಗಬೇಕು. ಮಡಿ ಎಂದರೆ ಚಿಕ್ಕಮಠ, ಚಿಕ್ಕಗುಡಿ, ಗುಡಿಸಲು. ಹಿಂದಿ ಪ್ರದೇಶದಲ್ಲಿ ರ ಮತ್ತು ಡ ವ್ಯತ್ಯಾಸಗಳಿರುತ್ತವೆ.

-ಎಚ್.ಎಸ್. ಮಂಜುನಾಥ, ಗೌರಿಬಿದನೂರು




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

